# ನರಬಲಿ ಸ್ಮಾರಕ

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕೆಳದಿಯ ವೀರಭದ್ರ ಮತ್ತು ರಾಮೇಶ್ವರ ದೇವಾಲಯವನ್ನು ದರ್ಶಿಸುವವರಿಗೆ ಅಲ್ಲಿಯ ಆವರಣದ ಜಗುಲಿಯಲ್ಲಿ ವಿರಾಜಮಾನವಾದ ನಾಲ್ಕು ಮರದ ಗೊಂಬೆಗಳು ಆಕಾರ ಮತ್ತು ಬಣ್ಣಗಳ ದೃಷ್ಟಿಯಿಂದ ಮನಸೆಳೆಯುತ್ತವೆ. ವಿಜಯನಗರ ಸಾಮ್ರಾಜ್ಯದ ಪಾಳೆಯಗಾರನಾಗಿದ್ದ ಕೆಳದಿಯ ಚೌಡಪ್ಪ ನಾಯಕನ ಮನೆಯಲ್ಲಿ ಕೆಲಸಕ್ಕಿದ್ದ ಎಡವ ಮತ್ತು ಮುರಾರಿ ಎಂಬುವವರು ನಿಧಿಯ ಸಲುವಾಗಿ ನರಬಲಿಯಾದದ್ದು ಇತಿಹಾಸದ ಆಧಾರಗಳಿಂದ ತಿಳಿದು ಬರುತ್ತದೆ. ಅವರ ಹೆಂಡತಿಯರಾದ ಮಾರಿ, ದುರ್ಗಿಯರು ನಂತರ ಸತಿ ಆದ ಉಲ್ಲೇಖವೂ ಇದೆ. ಅವರ ಸ್ಮರಣಾರ್ಥ ಈ ಮರದ ಗೊಂಬೆಗಳನ್ನು ಮಾಡಿಸಿದ್ದು ಇವುಗಳನ್ನು ಕಾರ್ತೀಕ ಅಮವಾಸ್ಯೆ ಮತ್ತು ರಾಮೇಶ್ವರ ದೇವರ ತೇರಿನ ಎರಡನೆ ದಿನ ರಥದಲ್ಲಿ ಇಟ್ಟು ಎಳೆಯುವ ಸಂಪ್ರದಾಯ ಈಗಲೂ ನಡೆದುಕೊಂಡು ಬಂದಿದೆ.

■ **ಧರ್ಮಾನಂದ ಶಿರ್ವ, ಬೆಂಗಳೂರು**





# ನೂರು ವರ್ಷ ದಾಟಿದ ಬುಟ್ಟಿ

ಶತಮಾನದಷ್ಟು ಹಳೆಯದಾದ ಈ ಬೆತ್ತದ ಬುಟ್ಟಿ (ಡಬ್ಬಿ)ಯನ್ನು ಅಜ್ಜನ ಕಾಲದಲ್ಲಿ ಚಿನ್ನದ ಒಡವೆಗಳನ್ನು ಇಡಲು ಬಳಸುತ್ತಿದ್ದರು. ಈಗ ಅಮ್ಮ ಹೂಬತ್ತಿ, ಎಳೆಬತ್ತಿಗಳನ್ನು ಶೇಖರಿಸಿ ಇಡುತ್ತಿದ್ದಾಳೆ. ಸೊರಬ ತಾಲ್ಲೂಕಿನ ಬಸೂರಿನಲ್ಲಿ ನನ್ನ ಅಪ್ಪ ಸೂರ್ಯನಾರಾಯಣ ಹೆಗಡೆಯವರ ಮನೆಯಲ್ಲಿ ಇದು ಜೋಪಾನವಾಗಿದೆ. ಇದರ ಮುಚ್ಚಳ ಹಾಕಲು ಮಾಡಿದ ಅಂಚಿನ ಹೆಣಿಕೆ ತುಂಬಾ ಸುಂದರ.

■ **ಜಾನಕಿ ಎಸ್., ಧಾರವಾಡ**

# ತುಳಸಿ ರಥ

ಈ ಸುಂದರ ಕಲಾತ್ಮಕ ತುಳಸಿ ಕಟ್ಟೆಯ ಪ್ರತಿಕೃತಿಯನ್ನು ಮರದಿಂದ ಮಾಡಲಾಗಿದೆ. ಇದರ ತಳಹದಿ ಮರದ ಹಲಗೆ ಮತ್ತು ನಾಲ್ಕು ಚಕ್ರಗಳಿಂದ ಕೂಡಿದ್ದು ರಥದಂತೆ ಗೋಚರಿಸುತ್ತದೆ. ಮುಂಭಾಗದಲ್ಲಿ ಗೋವಿನೊಂದಿಗೆ ಕೊಳಲನೂದುವ ಕೃಷ್ಣ, ಹಿಂಬದಿಯಲ್ಲಿ ವಿಷ್ಣುಚಕ್ರ, ಉಳಿದೆರಡು ಬದಿಗಳಲ್ಲಿ ಶಂಖದ ಕೆತ್ತನೆ ಇದೆ. ಇದು ಕಂಡುಬಂದಿದ್ದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕೆಳದಿಯ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರದಲ್ಲಿ.

■ **ಶಾಲಿನಿ ನಾಯಕ್, ಬೆಂಗಳೂರು**

